ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE : 11/03/2020

ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡಿಸಲಿರುವ ಕಾಂಗ್ರೆಸ್ | ರಮೇಶ್‌ಕುಮಾರ್ ಸಸ್ಪೆಂಡ್‌ಗೆ ಬಿಜೆಪಿ ಪಟ್ಟು

# ರಮೇಶ್‌ಕುಮಾರ್-ಸುಧಾಕರ್ ಬೈದಾಟ

■ **ವಿಕ ಸುದ್ದಿಲೋಕ** ಬೆಂಗಳೂರು 11/3/20

ಮೈತ್ರಿ ಸರಕಾರದ ಅವಧಿಯಲ್ಲಿ 17 ಶಾಸಕರನ್ನು ಅನರ್ಹಗೊಳಿಸಿದ ವಿಚಾರ ವಿಧಾನಸಭೆಯಲ್ಲಿ ಪ್ರತಿಧ್ವನಿಸಿ ಮಂಗಳವಾರ ಕೋಲಾಹಲ ಸೃಷ್ಟಿಯಾಯಿತು. ವೈದ್ಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಹಾಗೂ ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಅವರು ಸದನದ ಘನತೆಯನ್ನೂ ಮೀರಿ ಪರಸ್ಪರ ಅವಾಚ್ಯ ಪದಗಳಿಂದ ಬೈದಾಡಿಕೊಂಡರು. ಹಾಗಾಗಿ ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು. ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಕಾಂಗ್ರೆಸ್ ಮುಂದಾಗಿದ್ದರೆ, ರಮೇಶ್‌ಕುಮಾರ್ ಅವರನ್ನು ಅಮಾನತುಗೊಳಿಸುವಂತೆ ಬಿಜೆಪಿ ಪಟ್ಟು ಹಿಡಿದಿದೆ.

ಸಂವಿಧಾನದ ಆಶಯದ ಕುರಿತ ಚರ್ಚೆಯಲ್ಲಿ ಭಾಗಿಯಾಗಿದ್ದ ವೈದ್ಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಅನರ್ಹತೆ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದರು. ''ಸ್ಪೀಕರ್ ಪೀಠದಿಂದ ನಮಗೆ ಅನ್ಯಾಯವಾಗಿದೆ. 17 ಶಾಸಕರ ಜೀವನ ಹಾಳಾಗುತ್ತಿತ್ತು. ನಮ್ಮ ವಿರುದ್ಧ ಷಡ್ಯಂತ್ರ ಮಾಡಲಾಯಿತು,'' ಎಂದು ಸುಧಾಕರ್ ಹೇಳಿದರು. ತಕ್ಷಣವೇ ಕಾಂಗ್ರೆಸ್ ಶಾಸಕರು ಆಕ್ಷೇಪಿಸಿದರು. ಆದರೆ, ಸುಧಾಕರ್ ಸುಪ್ರೀಂಕೋರ್ಟ್ ಆದೇಶದ ಬಗ್ಗೆ ವಿವರಣೆ ನೀಡತೊಡಗಿದರು. ಈ ವೇಳೆ ಮೊಗಸಾಲೆಯಲ್ಲಿದ್ದ ಮಾಜಿ ಸ್ಪೀಕರ್ ಕೆ. ಆರ್.ರಮೇಶ್‌ಕುಮಾರ್ ಅವರೂ ಸದನಕ್ಕೆ ಬಂದರು. ರಮೇಶ್‌ಕುಮಾರ್ ಒಳಬಂದವರೇ ಕೋಪೋದ್ರಿಕ್ತರಾಗಿ ಸುಧಾಕರ್ ವಿರುದ್ಧ ವಾಗ್ದಾಳಿ ನಡೆಸಲು ಶುರು ಮಾಡಿದರು. ಸುಧಾಕರ್ ಕೂಡ ಅಷ್ಟೇ ತೀಕ್ಷ್ಣವಾಗಿ ತಿರುಗೇಟು ಕೊಟ್ಟರು.

**ಅವಾಚ್ಯ ಪದ ಬಳಕೆ**

ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಬೆರಳೆಣಿಕೆ ಶಾಸಕರಷ್ಟೇ ಸದನದಲ್ಲಿ ಇದ್ದರು. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಹಿರಿಯರು ಮೊಗಸಾಲೆಯಲ್ಲಿದ್ದರು. ಮತ್ತೊಂದೆಡೆ ಆಡಳಿತಾರೂಢ ಬಿಜೆಪಿ ಶಾಸಕರು ಕಾಂಗ್ರೆಸ್ ವಿರುದ್ಧ ಮುಗಿಬಿದ್ದಿದ್ದರು. ಇದರಿಂದ ತೀವ್ರ ಸಿಟ್ಟಿಗೆದ್ದ ರಮೇಶ್‌ಕುಮಾರ್ ಅವರು ಸುಧಾಕರ್ ವಿರುದ್ಧ ಹೂಂಕರಿಸುತ್ತಲೇ ಸಭಾಧ್ಯಕ್ಷರ ಪೀಠದ ಎದುರು ಧರಣಿಗೆ ಧಾವಿಸಿದರು. ರಮೇಶ್‌ಕುಮಾರ್ ಮತ್ತು ಸುಧಾಕರ್ ನಡುವೆ ಏಕವಚನ ಪದ ಪ್ರಯೋಗವೂ ಆಯಿತು. ಅಸಭ್ಯ, ಅವಾಚ್ಯ ಪದಗಳ ವಿನಿಯಮಯವೂ ನಡೆಯಿತು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಸಭಾಧ್ಯಕ್ಷರ ಪೀಠದಲ್ಲಿದ್ದ ಶಿವಾನಂದ ಪಾಟೀಲ್ ಕಲಾಪವನ್ನು 5 ನಿಮಿಷ ಮುಂದೂಡಿದರು. ಈ ಹೊತ್ತಿಗೆ ಸದನಕ್ಕೆ ಬಂದಿದ್ದ ಸಿದ್ದರಾಮಯ್ಯ ಅವರು ನಡೆದಿರುವ ಹಕೀಕತ್ ಏನೆಂದು ರಮೇಶ್ ಕುಮಾರ್‌ಗೆ ಕೇಳಿ ತಿಳಿದುಕೊಂಡರು. ಆಗಲೂ ಕೋಪದಿಂದ ಕುದಿಯುತ್ತಿದ್ದ ರಮೇಶ್‌ಕುಮಾರ್ ಅವರನ್ನು ಸಮಾಧಾನ ಪಡಿಸಿದ ಪಕ್ಷದ ಶಾಸಕರು ಹೊರಗೆ ಕರೆದು ಕೊಂಡು ಬಂದರು. ಸಿದ್ದರಾಮಯ್ಯ ಅವರೂ ಸಮಾಧಾನದ ಮಾತು ಹೇಳಿದರು. ಇದರ ನಡುವೆ 'ನಹೀ ಚಲೇಗಾ ನಹೀ ಚಲೇಗಾ ಗುಂಡಾಗಿರಿ ನಹೀ ಚಲೇಗಾ' ಎಂದು ಬಿಜೆಪಿ ಶಾಸಕರು ಘೋಷಣೆ ಕೂಗಿದರು. ಈ ಗೊಂದಲ ಉಂಟಾಗುತ್ತಿದ್ದಂತೆ ರಮೇಶ್ ಜಾರಕಿಹೊಳಿ ಸೇರಿದಂತೆ ಅರ್ಹರ ಕೋಟಾದಲ್ಲಿ ಸಚಿವರಾದವರೆಲ್ಲ ಸದನಕ್ಕೆ ಧಾವಿಸಿ ಬಂದಿದ್ದರು.

**ಸಿದ್ದರಾಮಯ್ಯ ಮಧ್ಯ ಪ್ರವೇಶ**

ಪುನಃ ಸಭೆ ಸೇರಿದಾಗ ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವ ಮಂಡಿಸಲು ಸಿದ್ದರಾಮಯ್ಯ ಮುಂದಾದರು. ಬಿಜೆಪಿ ಶಾಸಕರು ರಮೇಶ್‌ಕುಮಾರ್ ಅವರನ್ನೇ ಅಮಾನತು ಮಾಡಬೇಕು. ಸುಧಾಕರ್ ಅವರಿಗೆ ಕೆಟ್ಟದಾಗಿ ಬೈದಿದ್ದಾರೆ ಎಂದು ಒತ್ತಡ ತಂದರು. ರಮೇಶ್‌ಕುಮಾರ್ ಅವರಂಥ ಹಿರಿಯರಿಗೆ ಸುಧಾಕರ್ ಅಗೌರವ ತಂದಿದ್ದಾರೆ. ಅಧ್ಯಕ್ಷ ಪೀಠದ ಬಗ್ಗೆಯೂ ಮಾತನಾಡಿ ಅಗೌರವಿಸಿದ್ದಾರೆ. ಹಾಗಾಗಿ ನಿಯಮ 191ರ ಅನ್ವಯ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ನೋಟಿಸ್ ನೀಡಲಾಗಿದೆ. ಅದಕ್ಕೆ ಅವಕಾಶ ನೀಡಬೇಕೆಂದು ಸಿದ್ದರಾಮಯ್ಯ ಪಟ್ಟು ಹಾಕಿದರು. ಗದ್ದಲ ಜೋರಾದದ್ದರಿಂದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಕಲಾಪವನ್ನು ಬುಧವಾರ ಬೆಳಗ್ಗೆ 11 ಗಂಟೆಗೆ ಮುಂದೂಡಿದರು.

ಇದಕ್ಕೂ ಮುನ್ನ ಸುಧಾಕರ್ ಮಾತನಾಡುವಾಗ ತುರ್ತು ಪರಿಸ್ಥಿತಿ ಬಗ್ಗೆ ಪ್ರಸ್ತಾಪಿಸಿದ್ದರು. ಆಗಲೂ ಆಕ್ಷೇಪಿಸಿದ್ದ ರಮೇಶ್‌ಕುಮಾರ್, ''ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡಲು ನಿಮಗೆಲ್ಲಿ ನೈತಿಕತೆಯಿದೆ? ಕಾಂಗ್ರೆಸ್‌ನಿಂದ ಅಲ್ಲಿಗೆ ಹೋಗಿರುವವರು ನೀವು. ಯಡಿಯೂರಪ್ಪ, ಈಶ್ವರಪ್ಪ, ಸುರೇಶ್‌ಕುಮಾರ್ ಈ ಬಗ್ಗೆ ಹೇಳಿದರೆ ತಲೆಬಾಗಿ ಕೇಳುತ್ತೇನೆ,'' ಎಂದಿದ್ದರು. ಸುಧಾಕರ್, ''ನೀವು ಜನತಾ ದಳದಿಂದ ಕಾಂಗ್ರೆಸ್‌ಗೆ ಹೋದವರು,'' ಎಂದಿದ್ದರು.



ಸುಧಾಕರ್ ವಿರುದ್ಧ ಕಾನೂನಾತ್ಮಕವಾಗಿ ಹೋರಾಡುವ ನಿಲುವು ತೆಗೆದುಕೊಳ್ಳುವ ಬಗ್ಗೆ ಚರ್ಚಿಸಲು ಸಭೆ ನಡೆಸಲು ಸಿದ್ದರಾಮಯ್ಯ ಮುಂದಾದರು. ರಮೇಶ್ ಕುಮಾರ್ ಅವರನ್ನೂ ಕರೆದರು. ಆದರೆ, ರಮೇಶ್ ಕುಮಾರ್ ಸ್ವಲ್ಪ ಹೊತ್ತು ಮೊಗಸಾಲೆಯಲ್ಲೇ ಕುಳಿತಿದ್ದರು.

## ರಾಜೀನಾಮೆ ಇಂಗಿತ

ತಾವು ಮಾತುಕತೆಗೆ ಬರುವ ಪ್ರಶ್ನೆಯೇ ಇಲ್ಲವೆಂದು ಸಿದ್ದರಾಮಯ್ಯಗೆ ತಿಳಿಸಿದ ಅವರು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಇಂಗಿತವನ್ನೂ ವ್ಯಕ್ತಪಡಿಸಿದರು. ಬಳಿಕ ಅವರು ವಿಧಾನಸೌಧದಿಂದ ನಿರ್ಗಮಿಸಿದರು. ಈ ಮಧ್ಯೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸದನದ ನಾಯಕರನ್ನು ತಮ್ಮ ಕೊಠಡಿಗೆ ಕರೆಸಿಕೊಂಡು ಸಂಧಾನ ಸಭೆ ನಡೆಸಿದರು.

## ಸಿದ್ದು ಜಾರಕಿಹೊಳಿ ಭೇಟಿ

ಈ ನಡುವೆ ಕಲಾಪ ಮುಂದೂಡಿಕೆಯಾಗುತ್ತಿದ್ದಂತೆ ಸಚಿವರಾದ ರಮೇಶ್ ಜಾರಕಿಹೊಳಿ, ಎಸ್.ಟಿ. ಸೋಮಶೇಖರ್ ಅವರು ಸಿದ್ದರಾಮಯ್ಯ ಬಳಿ ಬಂದು ಅನೌಪಚಾರಿಕವಾಗಿ ಮಾತುಕತೆ ನಡೆಸಿದರು.

## ರಮೇಶ್‌ಕುಮಾರ್ ಕೆಟ್ಟ ಪದ ಬಳಸಿದ್ದಕ್ಕೆ ದಾಖಲೆ ಇದೆಯಾ?

ಸಚಿವ ಡಾ.ಸುಧಾಕರ್ ವಿರುದ್ಧ ರಮೇಶ್‌ಕುಮಾರ್ ಯಾವುದೇ ಕೆಟ್ಟ ಪದ ಬಳಸಿಲ್ಲ, ಅಷ್ಟಕ್ಕೂ ಅವರು ಹಾಗೆ ಹೇಳಿದ್ದಾರೆ ಎನ್ನಲು ಯಾವ ರೆಕಾರ್ಡ್ ಇದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ವಿಧಾನಸಭೆ ಕಲಾಪ ಮುಂದೂಡಿಕೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ರಮೇಶ್‌ಕುಮಾರ್ ವಿರುದ್ಧ ಸುಧಾಕರ್ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಆದಕ್ಕಾಗಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು,'' ಎಂದರು.